ಬೀಳುವಾಗ ಅನಿಸುವುದುಂಟು; ಆವತ್ತು ನನಗೆ ಬಿಡಿಸಿ ಕೊಟ್ಟ ಯೇಸುವಿಗೆ ಉಸ್ತಾದರ ಮುಖವೇ ಇತ್ತು. ಉಸ್ತಾದರಿಗಾಗಿ ಮನಸ್ಸು ತುಂಬಿ ಪ್ರಾರ್ಥಿಸುವಾಗೆಲ್ಲ ಅವರಿಗೂ ನನಗೂ ನಡುವೆ ಕಡಲೊಂದು ಭೋರ್ಗರೆಯುವುದು ನನ್ನ ಅನುಭವಕ್ಕೆ ಬರುತ್ತಿತ್ತು.

ಉಸ್ತಾದರ ಅಕ್ಷರಗಳಿಗಿಂತಲೂ ನನ್ನನ್ನು ನಾನಾಗಿಸಿದ್ದು ಅವರ ಚಿತ್ರಗಳು. ತಿರು ತಿರುಗಿ ನೋಡುತ್ತಾ ಭಯದಿಂದ ಬಿಡಿಸಿದ ಚಿತ್ರಗಳು. ಮುಂದೆ ಆಲಂಚೇರಿಯನ್ನೂ ದಾಟಿ ಈ ಶಿಷ್ಯ ಮದರಾಸು, ಬೆಂಗಳೂರು, ದಿಲ್ಲಿಯಲ್ಲೆಲ್ಲ ಚಿತ್ರಪ್ರದರ್ಶನ ಮತ್ತು ಸಂವಾದಗಳನ್ನು ನಡೆಸುವಾಗ ಎಂದೂ ದಾಟಲಾಗದ ತಡೆಗೋಡೆಯಂತೆ ಉಸ್ತಾದ್ ನಿಂತಿದ್ದರು. ನಾನು ರಚಿಸಿದ ಯಾವ ಯೇಸುವಿಗೂ ಉಸ್ತಾದರ ಯೇಸುವನ್ನು ಸೋಲಿಸಲಾಗಲೇ ಇಲ್ಲವಲ್ಲ...

ಹುಚ್ಚಾಸ್ಪತ್ರೆಯ ಸೆಲ್ಲಿನೊಳಗಿಂದ ಒಂದು ಮನುಷ್ಯಾಕೃತಿ ಎದ್ದು ನಿಂತಿತು.

ಬಂಗಾರ ಬಣ್ಣದ ಬಿಸಿಲಿಗೆ ಕಡು ನೀಲಿ ಬಣ್ಣ ಮೆತ್ತಿದ ಆ ಮುಖ ಬಾಗಿತು.

ನಾನು ಕರೆದೆ:

"ಉಸ್ತಾದ್..."

ಉಸ್ತಾದ್ ಸೂಕ್ಷ್ಮವಾಗಿ ನೋಡಿದರು. ಗುರುತು ಹತ್ತಿತು. ಕಣ್ಣುಗಳಲ್ಲಿ ಸಂತೋಷದ ಮಿಂಚು.

"ನೀನಾ?... ಮದರಾಸಿನ ಕಲಿಕೆ ಎಲ್ಲ ಮುಗೀತಾ?"

ನನ್ನಿಂದ ಮಾತು ಹೊರಡಲಿಲ್ಲ.

ಉಸ್ತಾದ್ ಮಾತು ಮುಂದುವರಿಸಿದರು:

"ನಾನಿಲ್ಲಿ ಸುಖವಾಗಿದ್ದೇನೆ. ಒಳಗೆ ಗೋಡೆಯಲ್ಲಿ ಬೇಕಾದ ಹಾಗೆ ಚಿತ್ರ ಬಿಡಿಸಬಹುದು. ಈ ಕಡೆಯ ವಾರ್ಡನ್ ಬಣ್ಣ ಬಣ್ಣದ ಚಾಕ್ ಪೀಸ್ ತಂದು ಕೊಡುತ್ತಾರೆ." ದುರ್ಬಲವಾದ ನಗುವನ್ನು ಮುಖದಲ್ಲಿ ತುಂಬಿಕೊಳ್ಳಲು ಪ್ರಯತ್ನಿಸುತ್ತಾ ಹೇಳಿದರು:

"ನಾನೂ ನನ್ನ ಜಿನ್ನೂ ಇಲ್ಲಿ ಸುಖವಾಗಿದ್ದೇವೆ ಮಗಾ; ಇಲ್ಲಿ ನೆಮ್ಮದಿ ಉಂಟು ಮಗಾ."

ಸಂದರ್ಶಕರ ಸಮಯ ಮುಗಿಯಿತು.

ನಾನು ಉಸ್ತಾದರ ಕೈಗೆ ಕೆಲವು ಪೇಪರ್ ಮತ್ತು ಪೇಂಟಿಂಗ್ ಟ್ಯೂಬ್‌ಗಳನ್ನು ತುರುಕಿದೆ.

"ಇನ್ನು ಸ್ವಲ್ಪ ದಿನ ವಾಟರ್ ಕಲರಿನಲ್ಲಿ ಚಿತ್ರ ಬಿಡಿಸಿ. ಪೇಪರಿನ ಒಳಗಡೆ ಬ್ರಷ್ ಇದೆ."

ಉಸ್ತಾದರ ಕಣ್ಣೀರಿನಲ್ಲಿ ಹಸಿದವನ ಬಯಕೆ ಇತ್ತು.

"ನಿನಗೆ ಯಾರು ಕೊಟ್ಟರು ಮಗಾ ಇವನ್ನೆಲ್ಲ. ನಿನ್ನ ಜಿನ್ನ್ ಕೊಟ್ಟದ್ದಾ?"

ಆ ವಿದಾಯದ ನಂತರ ಉಸ್ತಾದರನ್ನು ಮತ್ತೆ ಕಾಣಲಾಗಲಿಲ್ಲ.

ಉಸ್ತಾದರ ಜಿನ್ನನ್ನು ಗುರುತಿಸಿ ಪ್ರೋತ್ಸಾಹಿಸುತ್ತಿದ್ದ ವಾರ್ಡನ್ನಿಗೆ ವರ್ಗಾವಣೆ. ನಂತರ ಬಂದ ವಾರ್ಡನ್ ಗೋಡೆ ಹಾಳಾಗುತ್ತಿದೆ ಎಂದು ಸೆಲ್ಲಿನೊಳಗೆ ನೀರು ಹಾಕಿಸಿ ತೊಳೆಸಿದರು. ಮಮ್ಮುಮುಕ್ರಿ ಈಗ ಅಪಾಯಕಾರಿ ರೋಗಿಯಾಗಿ ಬದಲಾದರು.

ಕೊನೆಯ ಭೇಟಿ ನಡೆಯಲೇ ಇಲ್ಲ.

ಆಸ್ಪತ್ರೆ ಅಧಿಕಾರಿಗಳು ಎಲ್ಲ ವಿವರಿಸಿದರು:

"ಈಗ ಕಾಣಲು ಸಾಧ್ಯವಿಲ್ಲ. ಶಾಕ್‌ಟ್ರೀಟ್‌ಮೆಂಟ್ ಕೊಡುತ್ತಿದ್ದೇವೆ."

"ನಿನ್ನೆ ನಾಲ್ಕು ಜನರ ಮೇಲೆ ದಾಳಿ ಮಾಡಿದ್ದಾರೆ. ಗಂಜಿ ಕೊಡಲು ಹೋದ ವಾರ್ಡನ್ ಮುಖಕ್ಕೆ ಸಾರು ಚೆಲ್ಲಿದ್ದಾರೆ. ಈಗ ಹೊಸ ಸೆಲ್ಲಿನಲ್ಲಿ ಇಟ್ಟಿದ್ದೇವೆ."

ಡಾಕ್ಟರನ್ನು ಕಂಡು ಅಂಗಲಾಚಿದೆ:

"ಸಾರ್, ನಿಜ ಹೇಳಬೇಕೆಂದರೆ ಉಸ್ತಾದ್ ತುಂಬಾ ಶಾಂತ ಸ್ವಭಾವದವರು."